ಶ್ರೀ ಆರ್. ನಾರಾಯಣಸ್ವಾಮಿಯವರನ್ನು, ಕಳೆದ ಪಕ್ಷ ರಾಯಚೂರಿನ ಸರ್ಕಾರಿ ಪಾಲಿಟೆಕ್ನಿಕ್‌ಗೆ ವರ್ಗಾಯಿಸಲಾಗಿದ್ದು. ಅವರು ಅಲ್ಲಿ ಕೆಲಸಕ್ಕೆ ಹಾಜರಾಗಿ ಅನಂತರ ಬಹಳ ದಿನಗಳಿಂದ ಅನಧಿಕೃತವಾಗಿ ಗೈರುಹಾಜರಿಯಾಗಿ, ಪಾಠಪ್ರವಚನ ಸರಿಯಾಗಿ ಮಾಡದೇ ಇರುವ ವಿಷಯದ ಬಗ್ಗೆ ಸಂಬಂಧಿಸಿದ ಪ್ರಾಂಶುಪಾಲರಿಂದ ವರದಿ ಪಡೆದು, ಸೂಕ್ತ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.

ಇವರು ಶಾಸಕರ ಭವನದಲ್ಲಿ ಸದಾ ಅಲೆದಾಡುತ್ತಿದ್ದು ಮತ್ತು ರಾಜಕೀಯ ಮಾಡುತ್ತಿರುವ ವಿಷಯದ ಬಗ್ಗೆ ಸರ್ಕಾರಕ್ಕೆ ಖಚಿತ ಮಾಹಿತಿ ಇರುವುದಿಲ್ಲ. ಈ ಬಗ್ಗೆ ಖಚಿತ ಮಾಹಿತಿ ದೊರೆತರೆ, ಆ ಬಗ್ಗೆ ಕಾನೂನು ರೀತ್ಯ ಅವರ ಮೇಲೆ ಸೂಕ್ತ ಶಿಸ್ತಿನ ಕ್ರಮಕೈಗೊಳ್ಳಲಾಗುವುದು.

ಮೂಡಿಗೆರೆ ಜೂನಿಯರ್ ಕಾಲೇಜಿನಲ್ಲಿ ಹೆಚ್ಚಿನ ತರಗತಿಗಳನ್ನು ಮಂಜೂರು ಮಾಡುವ ಬಗ್ಗೆ

ಶ್ರೀಮತಿ ಮೋಟಮ್ಮ.—ಮಾನ್ಯ ಉಪಾಧ್ಯಕ್ಷರೇ, ಮೂಡಿಗೆರೆ ತಾಲ್ಲೂಕಿನಲ್ಲಿ ಕೇವಲ ೩ ಜೂನಿಯರ್ ಕಾಲೇಜುಗಳಿದ್ದು ೮ ಹೈಸ್ಕೂಲುಗಳಿರುತ್ತವೆ. ಈ ಸಾರಿ ಎಸ್‌ಎಸ್‌ಎಲ್‌ಸಿಯಲ್ಲಿ ಬಹಳ ವಿದ್ಯಾರ್ಥಿಗಳು ಪಿ.ಟ್ಗಾಗಿ ಪರದಾಡುತ್ತಿರುವುದು ಬಹಳ ಶೋಚನೀಯ ಸಂಗತಿಯಾಗಿದೆ. ವಿದ್ಯಾ ವಮಂತ್ರಿಗಳು ತಮ್ಮ ಇಲಾಖೆ ಬೇಡಿಕೆಗೆ ಉತ್ತರಿಸುತ್ತಾ, ಹೆಚ್ಚುವರಿ ತರಗತಿಗಳನ್ನು ನಡೆಸಲು ಅವಕಾಶ ಮಾಡಿಕೊಡುವುದಾಗಿ ಹೇಳಿರುತ್ತಾರೆ. ಆದರೆ ಇದುವರೆಗೂ ಯಾವುದೇ ಜೂನಿಯರ್ ಕಾಲೇಜಿಗೆ ಆದೇಶ ತಲುಪಿಲ್ಲ. ದಯಮಾಡಿ ಕೂಡಲೇ ಈ ಬಗ್ಗೆ ಕ್ರಮ ತೆಗೆದುಕೊಳ್ಳಲು ವಿದ್ಯಾ ಮಂತ್ರಿಗಳನ್ನು ಒತ್ತಾಯಿಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಉಪಾಧ್ಯಕ್ಷರೇ ನಾನು ಈಗಾಗಲೇ ಆದೇಶ ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಅಲ್ಲಿ ಕಾರ್ಯಕ್ರಮ ತೆಗೆದುಕೊಳ್ಳದೇ ಹೋಗಿದ್ದರೆ ಅದನ್ನು ಜಾಗ್ರತೆ ಮಾಡಿಸುತ್ತೇನೆ.

ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನಲ್ಲಿ ನೇಕಾರರಿಗೆ ವಸತಿಗೃಹ ಮತ್ತು ವರ್ಕ್‌ಶೆಡ್ ಕಟ್ಟುವ ಬಗ್ಗೆ

ಶ್ರೀ ಶಿವಾನಂದ ಪೆಚ್. ಕೌಜಲಗಿ.—ಮಾನ್ಯ ಉಪಾಧ್ಯಕ್ಷರೇ ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕು ಪೈಕಿ ಪಕ್ಕಂದ ಗ್ರಾಮದಲ್ಲಿ ನೇಕಾರರಿಗೆ ವಸತಿ ಗೃಹ ಮತ್ತು 'ವರ್ಕ್‌ಶೆಡ್' ಕಟ್ಟುವ ಬೇಡಿಕೆ ಬಹಳ ದಿನಗಳಿಂದ ಇದೆ. ಈ ಬಗ್ಗೆ ಪುಲಪ್ರಭಾ ಯೋಜನೆಯವರು ೪ ಎಕರೆ ಜಮೀನನ್ನು ಪುಕ್ಕಟೆಯಾಗಿ ಈಗಾಗಲೇ ಸರ್ಕಾರಕ್ಕೆ ಕೊಟ್ಟಿದ್ದಾರೆ. ಹಿಂದಿನ ಮುಖ್ಯ ಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರು ಸಹ ಅಲ್ಲಿಗೆ ಬಂದಾಗ ಇಲ್ಲಿ ನೇಕಾರರಿಗೆ ಮನೆಗಳನ್ನು ಮತ್ತು 'ವರ್ಕ್‌ಶೆಡ್' ಕಟ್ಟುವ ಸಲುವಾಗಿ ಆಶ್ವಾಸನೆ ಕೊಟ್ಟಿದ್ದರು. ಆದಕಾರಣ ಇಲ್ಲಿ ಇವುಗಳನ್ನು ಕಟ್ಟಿಸಿಕೊಡುವ ಬಗ್ಗೆ ತಮ್ಮ ಮುಖಾಂತರ ಮಾನ್ಯ ಉದ್ದಿಮೆ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀಮತಿ ಸರೋಜಾ ವಸಂತ (ಕೈಗಾರಿಕಾ ರಾಜ್ಯ ಸಚಿವರು).—ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು, ಬೆಳಗಾಂ ಜಿಲ್ಲೆಯ ಬೈಲಹೊಂಗಲದಲ್ಲಿ ತನ್ನ ಉತ್ಪಾದನ ಕೇಂದ್ರವನ್ನು ಹೊಂದಿದ್ದು, ಒಕ್ಕಂದ ಗ್ರಾಮದಲ್ಲಿನ ನೇಕಾರರೂ ಸೇರಿದಂತೆ ಈ ಕೇಂದ್ರದಲ್ಲಿ ೧೨೦ ಮಗ್ಗಗಳನ್ನು ಆಳವಡಿಸಿಕೊಳ್ಳಲಾಗಿದೆ. ಒಕ್ಕುಂದ ಗ್ರಾಮವೂ ಬೈಲಹೊಂಗಲದಿಂದ ೧೫ ಕಿ.ಮೀ. ದೂರದಲ್ಲಿದ್ದು ಈ ಗ್ರಾಮದಲ್ಲಿ ನಿಗಮವು ೫೦ ಮಗ್ಗಗಳನ್ನು ಆಳವಡಿಸಿಕೊಂಡಿದೆ. ಈ ಗ್ರಾಮದ ನೇಕಾರರೂ ಬೈಲಹೊಂಗಲ ಉಪಕೇಂದ್ರದಿಂದ ನೂಲು ಮತ್ತು ಇತರೆ ಕಚ್ಚಾ ಪದಾರ್ಥಗಳನ್ನು ಪಡೆದು ನೆಯ್ದ ಬಟ್ಟೆಯನ್ನು ಬೈಲಹೊಂಗಲ ಉಪಕೇಂದ್ರಕ್ಕೆ ಹಿಂತಿರುಗಿಸುತ್ತಾರೆ.

ಡಚ್ ನೆರವಿನ ''ಕರ್ನಾಟಕ ಇಂಡಸ್ಟ್ರೀಯಲ್ ಷೆಡ್ಸ್ ಯೋಜನೆ''ಯು ಮೊದಲನೇ ಹಂತದಲ್ಲಿ ನಿಗಮವು ಕೈಮಗ್ಗ ನೇಕಾರರಿಗೆ ರಾಜ್ಯದಲ್ಲಿನ ೨೫ ಸ್ಥಳಗಳಲ್ಲಿ ೧೯೪೨ ವಸತಿ ಹಾಗೂ ಕಾರ್ಯಗಾರಗಳನ್ನು ಒದಗಿಸಿದೆ. ಮೊದಲನೇ ಹಂತದ ಯೋಜನೆಯನ್ನು ೧೯೮೭ರಲ್ಲಿ ಪೂರ್ಣಗೊಳಿಸಲಾಯಿತು. ಮೊದಲನೇ

ಹಂತದಲ್ಲಿ ಬೈಲಹೊಂಗಲ ಸೇರಿರಲಿಲ್ಲ. ಇದೇ ಬೊ ಜನೆಯ ಎರಡನೇ ಹಂತದಲ್ಲಿ ರಾಜ್ಯದ ಬೇರೆ ಸ್ಥಳಗಳಲ್ಲಿ ಕೈಮಗ್ಗ ನೇಕಾರರಿಗೆ ಇನ್ನಷ್ಟು ವಸತಿ ಹಾಗೂ ಕಾರ್ಯಾಗಾರಗಳನ್ನು ಒದಗಿಸಲು ಯೋಜಿಸಲಾಗಿದ್ದರೂ, ಎರಡನೇ ಹಂತ ಇತ್ಯರ್ಥವಾಗದ ಕಾರಣ, ಬೈಲಹೊಂಗಲವು ಸೇರಿದಂತೆ ಇತರೆ ಸ್ಥಳಗಳಲ್ಲಿ ನೇಕಾರರಿಗೆ ವಸತಿ ಹಾಗೂ ಕಾರ್ಯಾಗಾರಗಳನ್ನು ಕಟ್ಟಲು ಯಾವುದೇ ಪ್ರಸ್ತಾಪವಿಲ್ಲ.

ನೇಕಾರರಿಗೆ ವಸತಿ ಹಾಗೂ ಕಾರ್ಯಾಗಾರಗಳನ್ನು ಒದಗಿಸುವ ಯೋಜನೆಯನ್ನು ಭಾರತ ಸರ್ಕಾರವು ಜುಲೈ ೧೯೮೫ರ ಹೊಸ ಜವಳಿ ನೀತಿಯನ್ವಯ ನಿರೂಪಿಸಿದೆ. ಈ ಯೋಜನೆಯನ್ವಯ ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ರೂ. ೩೦.೦೦ ಲಕ್ಷದಷ್ಟು ಸಹಾಯಧನದ ನೆರವು ಪಡೆದು ನಿಗಮವು ೧೯೮೬-೯೦ರಲ್ಲಿ ನೇಕಾರರಿಗೆ ಅವರು ವಾಸಿಸುವ ಸ್ಥಳಕ್ಕೆ ಹೊಂದಿಕೊಂಡಂತೆ ೧೦೦೦ ಕಾರ್ಯಾಗಾರಗಳನ್ನು ಒದಗಿಸಿದೆ.

೧೯೯೦-೯೧ರಲ್ಲಿ ಇದೇ ಯೋಜನೆಯನ್ವಯ, ನಿಗಮವು ನೆ ಕಾರರಿಗೆ ೫೦೦ ಕಾರ್ಯಾಗಾರಗಳನ್ನು ಮತ್ತು ೨೫೦ ವಸತಿ ಹಾಗೂ ಕಾರ್ಯಾಗಾರಗಳನ್ನು ರೂ. ೩೦.೦೦ ಲಕ್ಷಗಳ ವೆಚ್ಚದಲ್ಲಿ ಒದಗಿಸಲು ಯೋಜಿಸಿದ್ದು ಸಹಾಯಧನವನ್ನು ಈಗಾಗಲೇ ಮಂಜೂರು ಮಾಡಲಾಗಿದೆ. ಈ ಯೋಜನೆಯನ್ವಯ ಬೆಳಗಾಂ ಜಿಲ್ಲೆಯಲ್ಲಿ ೫೦ ಕಾರ್ಯಾಗಾರಗಳನ್ನು ಮತ್ತು ೪೦ ವಸತಿ ಹಾಗೂ ಕಾರ್ಯಾಗಾರಗಳನ್ನು ಪ್ರಸಕ್ತ ಸಾಲಿನಲ್ಲಿ ಒದಗಿಸಲು ಯೋಜಿಸಲಾಗಿದ್ದ, ಯಾವ ಯಾವ ಸ್ಥಳಗಳಲ್ಲಿ ವಸತಿ ಹಾಗೂ ಕಾರ್ಯಾಗಾರಗಳು ಮತ್ತು ಕಾರ್ಯಾಗಾರಗಳನ್ನು ಒದಗಿಸಬೇಕೆಂಬುದನ್ನು ಈ ಜಿಲ್ಲೆಯ ಬೇರೆ ಬೇರೆ ಕೇಂದ್ರಗಳಲ್ಲಿ ನಿಗಮವು ಆಳವಡಿಸಿಕೊಂಡಿರುವ ನೇಕಾರರ ಸಂಖ್ಯೆ, ವಸತಿ ಹಾಗೂ ಕಾರ್ಯಾಗಾರಗಳನ್ನು ಒದಗಿಸಲು ನೇಕಾರರಿಂದ ಬಂದಿರುವ ಬೇಡಿಕೆ ಹಾಗೂ ಯೋಜನೆಯನ್ವಯ ವಸತಿ ಕಾರ್ಯಾಗಾರ ಒದಗಿಸಬೇಕಾದಲ್ಲಿ ಫಲಾನುಭವಿಗಳೂ ಭೂಮಿಯನ್ನು ಹೊಂದಿರಬೇಕಾದ್ದರಿಂದ, ವಸತಿ ಮತ್ತು ಕಾರ್ಯಾಗಾರಗಳಿಗೆ ಬೇಡಿಕೆ ಸಲ್ಲಿಸಿರುವ ನೇಕಾರರೂ ಹೊಂದಿರುವ ಭೂಮಿಯ ಆಧಾರದ ಮೇಲೆ ನಿರ್ಧರಿಸಲಾಗುವುದು.

ಬೆಳಗಾಂ ತಾಲ್ಲೂಕಿನಲ್ಲಿ ಉಪ-ನೋಂದಣಾಧಿಕಾರಿಯವರು ದಾಖಲಾತಿಗಳನ್ನು ನೋಂದಾಯಿಸುವ ಬಗ್ಗೆ

SRI A. B. JAKANUR.—The letter dated 8-7-1987 of District Registrar, Belgaum the copy of which is enclosed is unjust, and contrary to law. As a result of this letter the Sub-Registrars in Belgaum District are refusing to register the sale deeds in respect of joint holding of ownership in the lands while all the Sub-Registrars in other districts of the State are registering such deeds. This has created discrimination. Therefore much hardship is being caused to joint owners of lands i.e., "Samaik Hissa Malika" in the district of Belgaum, to sell their share in the lands By such sale the purchaser will step in the shoes of the seller and does not contravene any law. I therefore request the Hon'ble Minister for Revenue to withdraw the said letter immediately in the interest of public.

SRI K. H. PATIL —Medam Speaker, I entirely agree with him. The letter dated 18-7-87 purported to have been issued by the District Registrar, Belgaum to the Sub-Registrars of Belgaum District which resulted in the refusal of registration of Sale Deeds in respect of Joint Holdings has come to the Notice of the Inspector General of Registration and Commissioner of Stamps. He has already instructed him not to take any action till clarification is